# ತನು

ದೀಪದಮಲ್ಲಿ
ಕಲೆ: ಎಸ್.ವಿ. ಹೂಗಾರ್



ಕೊರೆವ ಚಳಿಗೆ ರಕ್ತ ಹೆಪ್ಪುಗಟ್ಟುತ್ತಿತ್ತು. ಕಾವು ಕೊಡಲೆಂದು ತನ್ನೆರಡೂ ಕೈಗಳನ್ನು ಭರಭರನೆ ಉಜ್ಜುತ್ತಲೇ ಇದ್ದಳು. ಕಾವು ಏರುತ್ತಲಿಲ್ಲ, ಜೀವ ಹಿಡಿಯುತ್ತಿಲ್ಲ. ಯಾವ ಹೆದ್ದಾರಿಗಳಿಗೂ ಕೂಡದ ಈ ಹಾಳು ಸುರಿವ ಬಸ್ ಸ್ಟ್ಯಾಂಡಿನಲ್ಲಿ ನಡುರಾತ್ರಿ ಮಂಜುಗಡ್ಡೆಯಂಥ ಕಲ್ಲಿನ ಮೇಲೆ ಅವುಡುಗಚ್ಚಿ ಹೀಗೆ ಕೂರಬೇಕಿತ್ತೇ? ಈ ಅಬ್ಬೇಪಾರಿತನಕ್ಕೆ ಕಾರಣ ಸ್ವತಃ ತಾನೇ ಅಲ್ಲವೇ ಎಂದು ಶಪಿಸಿಕೊಂಡೊಡನೇ 'ಥತ್' ಎಂಬ ಧ್ವನಿ ಗಂಟಲ ಹಾರಿ ಭೂಮಿಗೆ ಬಿದ್ದುಬಿಟ್ಟಿತು. ಅಲ್ಲೆಲ್ಲೋ ಉಚ್ಚೆಹೊಯ್ಯಲು ಬಂದ ಕಂಡಕ್ಟರನೊಬ್ಬ ಕತ್ತು ಆನಿಸಿ ನೋಡಿಯೂಬಿಟ್ಟ. ಅವನಿಗೆ ತನ್ನ ಗುರುತು ಇರಬಹುದೇ? ಕುತ್ತಿಗೆ ಸುತ್ತ ಸುತ್ತಿದ್ದ ದಾವಣಿಯನ್ನು ಮುಖಮುಚ್ಚುವ ತನಕ ಎಳೆದುಕೊಂಡಳು. ಅವನು ಜಿಪ್ಪು ಏರಿಸುತ್ತಾ, ಓತಿಕ್ಯಾತ ನಗೆ ಬೀರುತ್ತಾ ಅದಾಗಲೇ ಮಲಗಿ ಗಡದ್ದು ನಿದ್ದೆಹೋಗಿದ್ದ ಬಸ್ಸನ್ನು ಕನಲಿಸುತ್ತಾ ಏರಿದ. ದೂರದಲ್ಲೊಂದು ಕಾರು ರಿವರ್ಸ್ ತೆಗೆದುಕೊಳ್ಳುವ ಸದ್ದಿಗೆ ಯೋಚನೆಯಿಂದ ಎಚ್ಚರಾದಳು. ಸುಮ್ಮನೆದ್ದು ತನಗೆ ಯಾವ ಭಾವವೂ ಇಲ್ಲವೆಂದು ತನಗೇ ಸಾಬೀತುಪಡಿಸಿಕೊಳ್ಳುವವಳ ಹಾಗೆ ನಿರ್ಲಿಪ್ತತೆಯಿಂದ ಸದ್ದುಬಂದ ದಿಕ್ಕಿನತ್ತ ನಡೆಯತೊಡಗಿದಳು. ಬಾಗಿ ಬಾಗಿಲು ತೆರೆದದ್ದು ತನಗಿಂತಲೂ ಎರಡುಪಟ್ಟು ಹಿರಿದಾದ ಗಂಡಸು ದೇಹ.

ಸೋಲೊಪ್ಪಬಾರದ ಕಾಳಗವಿದು. ಈ ಯುದ್ಧವನ್ನು ತಾನು ಗೆಲ್ಲಲೇಬೇಕಿತ್ತು. ಎದುರಾಳಿ ಶಕ್ತಿಶಾಲಿಯಿದ್ದಷ್ಟೂ ಆಟದ ರಂಗು ಹೆಚ್ಚಂತೆ. ಅದನ್ನೇ ತಾನೇ ಅವನೂ ಮೆಲ್ಲನೆ ಕಿವಿಯಲ್ಲಿ ಉಸುರಿದ್ದು. ತಂಬಾಕು ಜಗಿದೂ ಜಗಿದೂ ಕರೆಗಟ್ಟಿದ್ದ ಆ ಬಾಯಿಂದ, ಅಬ್ಬಾ... ಅದೆಂಥ ಗಬ್ಬು ವಾಸನೆ!

ಮೈಜಾಡಿಸಿ ಎದ್ದವಳ ಮೊಲೆಯಿಂದ ಹಾಲಿನ್ನೂ ಒಸರುತ್ತಲೇ ಇದೆ. ವಿಷಣ್ಣ ನಗೆ ನಕ್ಕು ದಾವಣಿಯಿಂದ ಒರೆಸಿಕೊಂಡಳು. ಸುಳ್ಳುಸುಳ್ಳೇ ಗ್ರಹಣವಿಡಿದು ಬಿಟ್ಟಂತ ಕಳ್ಳಮುಂಜಾವು ಕಣ್ಣಿಗೆ ರಾಚಿತು. ಅದಾಗಲೇ ಇಬ್ಬನಿ ಸುರಿದು ನಿಂತಿದ್ದ ಕಿಟಕಿ ಗಾಜಿನ ಮೇಲೆ ಹಗೂರಾಗಿ ಬೆರಳನ್ನಾಡಿಸಿದಂತೆ ರೂಢಿಯಲ್ಲಿ ಮೂಡಿದ್ದು ತನ್ನದೇ ಸಹಿ. ಇಂಥ ಸಹಿಗಳನ್ನು ಅದೆಷ್ಟು ಕಡೆ ಹಾಕಿದ್ದಾಳೋ ಲೆಕ್ಕವಿಲ್ಲ! ಒಂದೊಂದು ಸಹಿಯಿಂದಲೂ ಬದುಕು ಇಳಿದದ್ದೇ ಹೊರತು ಹತ್ತಲಿಲ್ಲ.

***

ಮೂಗಿನ ತುದಿಯಿಂದ ಬೊಕ್ಕೆಯೊಡೆದು ಸುರಿಯುವಂತ ಕೋಪದಲ್ಲಿ ಗದರಿಸಿ ಎಲ್ಲರನ್ನೂ ಕುಳ್ಳಿರಿಸಿದ್ದಳು ಮುಬೀನಮ್ಮ. ಒಂದು ವ್ಯಾನಿನ ತುಂಬಾ ಬಸುರಿಯರನ್ನೂ, ಬಸುರಾಗಲು ಬಂದವರನ್ನೂ ತುಂಬಿಕೊಂಡು ಬರಲಾಗಿತ್ತು. ಗಾಡಿ ನಿಂತ ಸಿಗ್ನಲ್ಲುಗಳಲ್ಲಿ ಅಕ್ಕಪಕ್ಕದ ಬೈಕು–ಕಾರುಗಳ ಸವಾರರು ತಮ್ಮನ್ನು ಕೈದಿಗಳೇನೋ, ಇಲ್ಲಾ ನಿರಾಶ್ರಿತರ ಶಿಬಿರಕ್ಕೆ ಹೊರಟ ಭಿಕ್ಷುಕರೇನೋ ಅಂದುಕೊಂಡಿರಬೇಕು ಎನಿಸಿತು ಇವಳಿಗೆ. 'ನಾವು ಅವರಲ್ಲಾ... ನಾವು ಇವರು. ಇಂತಿಂಥ